ದಿನಾಂಕಃ **14/01/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಟಿ ಎಮ್ ವಕೀಲರಿಂದಃ

ನಾನು ದ್ವಿತೀಯ ಪಿ ಯು ಸಿ ಓದಿದ್ದೇನೆ. ನಾನು ದಾವಾ ಆಸ್ತಿಯ ಕ್ರಯ ಕರಾರು ಮಾತುಕತೆಯಲ್ಲಿ ಮತ್ತು ನೊಂದಾವಣೆ ಸಮಯದಲ್ಲಿ ಹಾಜರಿದ್ದೇ. ಮಾತುಕತೆ ಸಮಯದಲ್ಲಿ ವಾದಿಯು ಹೊಳೆನರಸೀಪುರ ನಗರದಲ್ಲಿ ವಾಸವಿದ್ದರು. ನನಗೆ ನ್ಯಾಯಾಲಯದಿಂದ ನೋಟೀಸಿನಲ್ಲಿ ಯಾವ ವಿಷಯಕ್ಕೆ ಸಾಕ್ಷಿ ಹೇಳಬೇಕೆಂದು ನಮೂದಾಗಿತ್ತು. ನೋಟೀಸಿನಲ್ಲಿ ವಾದಿ ಮತ್ತು ಪ್ರತಿವಾದಿಯರ ಮಧ್ಯ ವಿಭಾಗಕ್ಕಾಗಿ ದಾವೆ ಇರುವ ಕಾರಣ ವಾದಿ ಪರವಾಗಿ ಸಾಕ್ಷಿ ಹೇಳಲು ಬರುವಂತೆ ನಮೂದಾಗಿತ್ತು. ನಾನು ನೋಟೀಸಿನ ನಂತರ ವಾದಿ ಪರ ವಕೀಲರ ಬಳಿ ಹೋಗಿ ನಂತರ ಇಲ್ಲಿ ಸಾಕ್ಷಿ ಹೇಳಲು ಬಂದಿದ್ದೇನೆ. ವಕೀಲರ ಬಳಿ ನಾನು ವಾದಿಯೊಂದಿಗೆ ಹೋಗಿರುತ್ತೇನೆ.

2. ದಿನಾಂಕ 15.08.2005 ರಂದು ದಾವಾ ಆಸ್ತಿಯ ಮಾರಾಟದ ಮಾತುಕತೆಯಾಗಿತ್ತು. ಅದಕ್ಕೆ ನನ್ನನ್ನು ವಾದಿ ಪಡವಲ ಹಿಪ್ಪೆಯ ಪಿ ಡಬ್ಲ್ಯೂ 2 ರವರ ಮನೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನನ್ನನ್ನು, ನಾಗೇಶ್, ಮತ್ತು ಪಿ ಡಬ್ಲ್ಯೂ 2 ರವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಬೆಳಿಗ್ಗೆ 8.30 ಸುಮಾರಿಗೆ ಕ್ರಯದ ಮೊತ್ತ 4,54,000/ ಮಾತುಕತೆ ಆಯಿತು. ಅದರಲ್ಲಿ ವಾದಿಯು 1000/- ರೂ ಹಣವನ್ನು ಮುಂಗಡ ಹಣವಾಗಿ ನಾಗೇಶ್ ರವರಿಗೆ ಕೊಟ್ಟರು. ಅವತ್ತು ಯಾವುದೇ ಕ್ರಯ ಒಪ್ಪಂದ ಪತ್ರವಾಗಿರಲಿಲ್ಲ.

3. ದಿನಾಂಕ 25.05.2006 ರಂದು ದಾವಾ ಆಸ್ತಿ ನೊಂದಾವಣೆ ಆಯಿತು. ನೊಂದಾವಣೆಗೂ ಮೊದಲು ಪತ್ರ ಬರಹಗಾರರ ಕಛೇರಿಗೆ ನಾನು ಹೋಗಿದ್ದೆ. ಅಲ್ಲಿ ಮಾರಾಟಗಾರರಾದ ಕೆಂಚಮ್ಮ, ರಾಜ್ ಕುಮಾರ್, ನಾಗೇಶ್, ವಾದಿ ಮತ್ತು ಒಂದನೇ ಪ್ರತಿವಾದಿ ಇದ್ದರು. ಇವರನ್ನು ಹೊರತುಪಡಿಸಿ ಲಕ್ಷ್ಮೇಗೌಡ, ಕಾಳೇಗೌಡ, ಮತ್ತು ವೀರೇಗೌಡ, ಶಿವನಂಜೇಗೌಡ ಇದ್ದರು. ನಿ ಪಿ 1 ರ ಒಳಾಂಶಗಳನ್ನು ನಾನು ಓದಿದ್ದೇನೆ. ನಿಪಿ 1 ರಲ್ಲಿ ವಾದಿ 4,54,000 ರೂ. ನೀಡಿದ್ದಾರೆಂದು ನಮೂದಾಗಿಲ್ಲ.

4. ನಮ್ಮೂರಿನಲ್ಲಿ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ನನಗೂ ಮತ್ತು ಎರಡನೇ ಪ್ರತಿವಾದಿಗೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಆ ದ್ವೇಷಕ್ಕೆ ನಾನು ವಾದಿ ಪರವಾಗಿ ಇಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಮುಕ್ತಾಯ:</u>

<u>ಮರು ವಿಚಾರಣೆ ಇಲ್ಲ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ